ಆರ್. ಎ. ನಂಃ 35/2020
ಆರ್.ಡಬ್ಲ್ಯೂಃ 1

ಇಂದು ದಿನಾಂಕಃ ***20-02-2023*** ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನಬೋದಿಸಲಾಯಿತು**.**

ಮುಂದುವರೆದ ಪಾಟೀ ಸವಾಲುಃ ಮೇಲ್ಮನವಿದಾರರ ಪರ ಶ್ರೀ ಎಚ್. ಎಂ. ಎಸ್. ವಕೀಲರಿಂದಃ

ಸಿದ್ದನಗೌಡ ಲಕ್ಕನಗೌಡರ ಇವರ ಶವ ಸಂಸ್ಕಾರಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಶವ ಸಂಸ್ಕಾರಕ್ಕೆ ಹೋಗಿದ್ದರ ಬಗ್ಗೆ ನಾನು ದಾಖಲೆಯನ್ನು ಹಾಜರು ಪಡಿಸಿಲ್ಲ. ವೀರಹನುಮಂತಗೌಡರ 4 ಜನ ಮಕ್ಕಳಲ್ಲಿ ಒಬ್ಬರಿಗೊಬ್ಬರಲ್ಲಿ ವೈ ಮನಸ್ಸು ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಮೂಲ ದಾವೆ ನಂಃ 100/2016 ರ ದಾವೆಯ ಸಮನ್ಸನ್ನು ಈ ಮೇಲ್ಮನವಿದಾರರು ತೆಗೆದುಕೊಂಡಿಲ್ಲ. ನಿಆರ್ -11 ರ ಪ್ರಕಾರ ಮೇಲ್ಮನವಿದಾರರ ಅಣ್ಣನ ಮಗನಿಗೆ ದಾವೆಯ ಸಮನ್ಸು ಜಾರಿ ಆಗಿದೆ ಎಂದರೆ ಸಾಕ್ಷಿ ಎಲ್ಲರಿಗೆ ಕಳುಹಿಸಿರುತ್ತೇವೆ ಎಂದು ಹೇಳುತ್ತಾರೆ. ನ್ಯಾಯಾಲಯದ ಆಯುಕ್ತರು ನೋಟಿಸನ್ನು ಕೊಡುವವರೆಗೂ ಮೂಲ ದಾವೆ ನಂಃ 100/2016 ರ ದಾವೆಯ ಬಗ್ಗೆ ಈ ಮೇಲ್ಮನವಿದಾರರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ಬಗ್ಗೆ ಮೇಲ್ಮನವಿದಾರನಿಗೆ ಗೊತ್ತಿಲ್ಲದ ಕಾರಣ ಸದರಿ ದಾವೆಯಲ್ಲಿ ಪ್ರತಿರೋದಿಸಲು ಆಗಿಲಿಲ್ಲ ಎಂದರೆ ಸಾಕ್ಷಿ 2 ನೇ ಬಾರಿಗೆ ಬಂದಿರುತ್ತಾರೆ ಎಂದು ಹೇಳುತ್ತಾರೆ. ನಾವು 2 ನೇ ಬಾರಿ ನ್ಯಾಯಾಲಯಕ್ಕೆ ಬಂದಾಗ ಈ ಮೇಲ್ಮನವಿದಾರ ಹಾಜರಾಗಿರುತ್ತಾನೆ. 2016 ರಲ್ಲಿ ಸದರಿ ದಾವೆಯನ್ನು ಸಲ್ಲಿಸಿದ್ದು, 2014 ರಲ್ಲಿ ದಾವೆಯನ್ನು ಸಲ್ಲಿಸಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಲಕ್ಕನಗೌಡನ ಕುಟುಂಬದವರಿಗೆ ಸಂಬಂಧ ಇಲ್ಲದೆ ಇದ್ದರು ಸಹ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 20-02-2023

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು